**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/8/ಸುತ್ತೋಲೆ/2022-23/ವಿ.ವೇ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು ದಿನಾಂಕ:21.01.2023

## ಸುತ್ತೋಲೆ

ವಿಷಯ: 2022-23ನೇ ಸಾಲಿಗೆ ಸರ್ಕಾರಿ ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರು ಪೂರ್ಣ ಶುಲ್ಕ ಮರುಪಾವತಿಗಾಗಿ ಎಸ್.ಎಸ್.ಪಿ. ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಇಡಿ/237/ಹೆಚ್‌ಪಿಸಿ/2022, ಬೆಂಗಳೂರು, ದಿನಾಂಕ:11.01.2023.
2. ತಿದ್ದುಪಡಿ ಆದೇಶ ಸಂಖ್ಯೆ: ಇಡಿ/237/ಹೆಚ್ ಪಿಸಿ/2022 ದಿ: 16.01.2023.
3. ಸರ್ಕಾರದ ಆದೇಶ ಸಂಖ್ಯೆ:ಇಡಿ/67/ಹೆಚ್‌ಪಿಯು2018 ಬೆಂಗಳೂರು ದಿನಾಂಕ:15.12.2018.

**********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2022-23ನೇ ಸಾಲಿನಿಂದ ಹೆಣ್ಣುಮಕ್ಕಳ ಪೂರ್ಣಶುಲ್ಕ ಮರುಪಾವತಿ ಯೋಜನೆಯನ್ನು ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಸದರಿ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರು ಹೆಣ್ಣುಮಕ್ಕಳ ಪೂರ್ಣಶುಲ್ಕ ಮರುಪಾವತಿಗಾಗಿ ಎಸ್.ಎಸ್.ಪಿ. ಪೋರ್ಟಲ್ **(SSP Portal)** ಮೂಲಕ ನೂತನ/ನವೀಕರಣಕ್ಕಾಗಿ (2021-22ನೇ ಸಾಲಿನ ಹೆಣ್ಣುಮಕ್ಕಳ ಪೂರ್ಣಶುಲ್ಕ ಮರುಪಾವತಿ ಪ್ರಯೋಜನ ಪಡೆದಿರುವ ವಿದ್ಯಾರ್ಥಿನಿಯರು) ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.

ಷರತ್ತುಗಳು ಮತ್ತು ನಿಬಂಧನೆಗಳು:

1. ಹೆಣ್ಣುಮಕ್ಕಳ ಪೂರ್ಣಶುಲ್ಕ ವಿನಾಯಿತಿ ಯೋಜನೆಯಡಿ ಶುಲ್ಕ ಮರುಪಾವತಿಗಾಗಿ ಅರ್ಜಿ ಸಲ್ಲಿಸುವ ವಿದ್ಯಾರ್ಥಿನಿಯರು ಬೇರೆ ಯಾವುದೇ ಯೋಜನೆಯಡಿ ಶುಲ್ಕ ಮರುಪಾವತಿ ಪಡೆದಿರಬಾರದು.
2. ಸಂಚಿಹೊನ್ನಮ್ಮ ಹಾಗೂ ಸರ್.ಸಿ.ವಿ.ರಾಮನ್ ಪ್ರತಿಭಾನ್ವಿತ ವಿದ್ಯಾರ್ಥಿ ವೇತನ ಪಡೆಯುವ ವಿದ್ಯಾರ್ಥಿನಿಯರು ಸದರಿ ಯೋಜನೆಗೆ ಅರ್ಹರಿರುತ್ತಾರೆ.
3. ಪುನರಾವರ್ತಿತ ವಿದ್ಯಾರ್ಥಿನಿಯರು ಈ ಯೋಜನೆಗೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ

1) ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ – ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ
2) ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಸೂಚನಾ ಫಲಕದಲ್ಲಿ ಸುತ್ತೋಲೆಯಲ್ಲಿರುವ ಮಾಹಿತಿಯನ್ನು ವಿದ್ಯಾರ್ಥಿಗಳ ಗಮನಕ್ಕೆ ತರುವುದು
3) ಮಾಹಿತಿ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ
4) ಕಛೇರಿ ಪ್ರತಿ.

ಸುತ್ತೋಲೆ (ನವೀಕರಣ ಮಾಹಿತಿ)